# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 921

2) ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 13-12-2023

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮೀನುಗಾರರ ಹಿತದೃಷ್ಟಿಯಿಂದ ಪ್ರತ್ಯೇಕ ವಿವಿ ಸ್ಥಾಪನೆ ಹಾಗೂ ಮೀನುಗಾರರನ್ನು ಆರ್ಥಿಕವಾಗಿ ಮೇಲೆತ್ತಲು ಸೂಕ್ತ ಮಾರುಕಟ್ಟೆ ಒದಗಿಸಬೇಕಾದ ಅನಿವಾರ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಈಗಾಗಲೇ ಕೈಗೊಂಡಿರುವ ಕ್ರಮಗಳೇನು; | **<u>ರಾಜ್ಯದಲ್ಲಿ ಮೀನುಗಾರರ ಹಿತದೃಷ್ಟಿಯಿಂದ ಪ್ರತ್ಯೇಕ ವಿಶ್ವವಿದ್ಯಾ ಲಯ ಸ್ಥಾಪನೆಗೆ ಕೈಗೊಂಡಿರುವ ಕ್ರಮಗಳು:</u>**<br><br>ಮೀನುಗಾರರ ಹಿತದೃಷ್ಟಿಯಿಂದ ಮತ್ತು ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಕರ್ನಾಟಕದಲ್ಲಿ ಮೀನುಗಾರಿಕೆಗೆ ವಿಪುಲ ಅವಕಾಶಗಳಿರುವುದರಿಂದ ಮತ್ತು ಭಾರತ ದೇಶದಲ್ಲಿ ಪ್ರಪ್ರಥಮವಾಗಿ ಪ್ರಾರಂಭವಾದ ಮೀನುಗಾರಿಕೆ ಮಹಾವಿದ್ಯಾಲಯ ಮಂಗಳೂರಿನಲ್ಲಿರುವುದರಿಂದ ಪ್ರತ್ಯೇಕ ಮೀನುಗಾರಿಕೆ ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆ. ಈ ಹಿಂದೆ ಒಂದು ಪ್ರತ್ಯೇಕ ಮೀನುಗಾರಿಕೆ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ಸಭೆಯನ್ನು ನಡೆಸಿ ಪ್ರತ್ಯೇಕ ಮೀನುಗಾರಿಕೆ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ ಪ್ರಾಥಮಿಕ ಅಭಿಪ್ರಾಯ ನೀಡಿರುತ್ತದೆ. ಪ್ರಾಥಮಿಕ ಅಭಿಪ್ರಾಯದಂತೆ, ಶಿಕ್ಷಣ ತಜ್ಞರು, ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ (**ICAR**)ಯ ವಿಜ್ಞಾನಿಗಳು, ಮೀನುಗಾರಿಕೆ ಕ್ಷೇತ್ರದ ತಜ್ಞರನ್ನು ಒಳಗೊಂಡಂತೆ ಒಂದು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸಿ ಸಮಗ್ರ ವರದಿಯನ್ನು ಪಡೆಯಲಾಗುವುದು. |

**ಮೀನುಗಾರರನ್ನು ಆರ್ಥಿಕವಾಗಿ ಮೇಲೆತ್ತಲು ಸೂಕ್ತ ಮಾರುಕಟ್ಟೆ ಒದಗಿಸುವ ಬಗ್ಗೆ ಕೈಗೊಂಡಿರುವ ಕ್ರಮಗಳು:**

ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯದಲ್ಲಿ ವಿವಿಧ ಯೋಜನೆಯಡಿ ಒಟ್ಟು 37 ಮೀನು ಮಾರುಕಟ್ಟೆಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ ಆರ್.ಕೆ.ವಿ.ವೈ ಯೋಜನೆಯಡಿ ಒಟ್ಟು 26 ಮೀನು ಮಾರುಕಟ್ಟೆಗಳಲ್ಲಿ 25 ಮೀನು ಮಾರುಕಟ್ಟೆಗಳು ಪೂರ್ಣಗೊಂಡಿದ್ದು, 1 ಮೀನು ಮಾರುಕಟ್ಟೆಯ ಕಾಮಗಾರಿ ಪ್ರಗತಿಯಲ್ಲಿದೆ.

ಎನ್‌ಎಫ್‌ಡಿಬಿ ಯೋಜನೆ / ರಾಜ್ಯ ಸರ್ಕಾರದ ಯೋಜನೆಯಡಿ ಹಾಗೂ ನಬಾರ್ಡ್ ಆರ್‌ಐಡಿಎಫ್ ಟ್ರಾಂಚ್-22 ಹಾಗೂ 24ರಡಿ ಒಟ್ಟು 11 ಮೀನು ಮಾರುಕಟ್ಟೆಗಳ ಕಾಮಗಾರಿ ಪೂರ್ಣಗೊಂಡಿರುತ್ತದೆ. ವಿವರ ಈ ಕೆಳಗಿನಂತಿದೆ:-

**ಆರ್‌ಕೆವಿವೈ ಯೋಜನೆಯಡಿ ಪೂರ್ಣಗೊಂಡಿರುವ 24 ಮೀನು ಮಾರುಕಟ್ಟೆಗಳು**

| ಜಿಲ್ಲೆ | ತಾಲ್ಲೂಕು | ಸ್ಥಳ |
|---|---|---|
| ದಕ್ಷಿಣಕನ್ನಡ | ಮಂಗಳೂರು | ಬಜಪೆ |
| | | ಕೆಮ್ರಾಲ್ |
| | | ಮಂಗಳಾಪೇಟೆ |
| | | ಗಂಜಿಮಠ |
| | ಮೂಡಬಿದ್ರೆ | ಹಳೆಯಂಗಡಿ |
| | ಬಂಟ್ವಾಳ | ಸಿದ್ಧಕಟ್ಟೆ, |
| | | ಮಾಣಿ |
| ಉಡುಪಿ | ಉಡುಪಿ | ವಾರಂಬಳ್ಳಿ, |
| | | ಮೂಡುಬೆಳ್ಳೆ |
| | | ಹೆಜಮಾಡಿ |
| | | ಕುಂಜಿಬೆಟ್ಟು |
| | | ಸಂತೆಕಟ್ಟೆ |
| | | ಪರ್ಕಳ |
| | | ಅಂಬಾಗಿಲು |
| | ಕುಂದಾಪುರ | ಕೋಟೇಶ್ವರ |
| | | ಹುಣ್ಸೆಮಕ್ಕಿ |
| | | ಬಸ್ರೂರು |
| | | ಅಮಾಸೆಬೈಲು |
| | | ಗಂಗೊಳ್ಳಿ |
| | | ಕಂಡ್ಲೂರು |
| | | ಅಂಪಾರು |
| ಉತ್ತರಕನ್ನಡ | ಕಾರವಾರ | ಕೋಡಿಭಾಗ್ |
| | | ಆಮದಳ್ಳಿ |
| | | ಆವರ್ಸಾ |
| | ಭಟ್ಕಳ | ಹೆಬಳೆ |

<table>
<tr>
<td></td>
<td></td>
<td>
ಆರ್‌ಕೆವಿವೈ ಯೋಜನೆಯಡಿ ಪ್ರಗತಿಯಲ್ಲಿರುವ 1 ಮೀನು ಮಾರುಕಟ್ಟೆ
<table>
<tr><th>ಜಿಲ್ಲೆ</th><th>ತಾಲ್ಲೂಕು</th><th>ಸ್ಥಳ</th></tr>
<tr><td>ಬೆಳಗಾವಿ</td><td>ಬೆಳಗಾವಿ</td><td>ಬೆಳಗಾವಿ</td></tr>
</table>
ಎನ್‌ಎಫ್‌ಡಿಬಿ ಯೋಜನೆ / ರಾಜ್ಯ ಸರ್ಕಾರದ ಯೋಜನೆ / ನಬಾರ್ಡ್ ಆರ್‌ಐಡಿಎಫ್ ಟ್ರಾಂಚ್-22 ಹಾಗೂ 24ರಡಿ ಪೂರ್ಣಗೊಂಡಿರುವ 11 ಮೀನು ಮಾರುಕಟ್ಟೆಗಳು
<table>
<tr><th>ಜಿಲ್ಲೆ</th><th>ತಾಲ್ಲೂಕು</th><th>ಸ್ಥಳ</th></tr>
<tr><td>ದಕ್ಷಿಣಕನ್ನಡ</td><td>ಸುಳ್ಯ</td><td>ಸುಳ್ಯ</td></tr>
<tr><td rowspan="3">ಉಡುಪಿ</td><td rowspan="3">ಕುಂದಾಪುರ</td><td>ತೆಕ್ಕಟ್ಟೆ</td></tr>
<tr><td>ಸಾಸ್ತಾನ</td></tr>
<tr><td>ಹಾಲಾಡಿ</td></tr>
<tr><td>ಚಿಕ್ಕಮಗಳೂರು</td><td>ಎನ್.ಆರ್.ಪುರ</td><td>ಎನ್.ಆರ್.ಪುರ</td></tr>
<tr><td>ಯಾದಗಿರಿ</td><td>ಯಾದಗಿರಿ</td><td>ಯಾದಗಿರಿ</td></tr>
<tr><td>ಕೊಡಗು</td><td>ವಿರಾಜಪೇಟೆ</td><td>ವಿರಾಜಪೇಟೆ</td></tr>
<tr><td>ಶಿವಮೊಗ್ಗ</td><td>ಸಾಗರ</td><td>ಸಾಗರ</td></tr>
<tr><td>ವಿಜಾಪುರ</td><td>ಇಂಡಿ</td><td>ಇಂಡಿ</td></tr>
<tr><td>ರಾಯಚೂರು</td><td>ಸಿಂಧನೂರು</td><td>ಸಿಂಧನೂರು</td></tr>
<tr><td>ಬಳ್ಳಾರಿ</td><td>ಸಿರುಗುಪ್ಪ</td><td>ಸಿರುಗುಪ್ಪ</td></tr>
</table>
</td>
</tr>
<tr>
<td>ಇ)</td>
<td>ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ;<br>(ಒದಗಿಸಿರುವ ಅನುದಾನದ ವಿವರಗಳನ್ನು ನೀಡುವುದು)</td>
<td>ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.49.50 ಕೋಟಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಸರ್ಕಾರದ ಪತ್ರ ಸಂಖ್ಯೆ: ಪಸಂಮೀ/ಇ-68/ಮೀಇಯೋ/2023 ದಿನಾಂಕ: 19-04-2023 ರಲ್ಲಿ 2023-24 ನೇ ಸಾಲಿನ ಲೆಕ್ಕ ಶೀರ್ಷಿಕೆ 4405-00-104-0-02-386 ರಡಿ ರೂ.1500.00 ಲಕ್ಷಗಳ ಅನುದಾನ ಒದಗಿಸಲಾಗಿದೆ. ಸದರಿ ಅನುದಾನದಲ್ಲಿ ಮರವಂತೆ 2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ರೂ.750.00 ಲಕ್ಷ ಹಾಗೂ ಮಂಗಳೂರು 3ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ರೂ.750.00 ಲಕ್ಷ ಒದಗಿಸಲಾಗಿದೆ.</td>
</tr>
</table>

| | | |
|---|---|---|
| ಈ) | ಬಂದರುಗಳ ಆಧುನೀಕರಣ ಹಾಗೂ ಕರ್ನಾಟಕ ಕರಾವಳಿಯ ಸಮಗ್ರ ಅಭಿವೃದ್ಧಿಗಾಗಿ ದೂರ ದೃಷ್ಟಿಕೋನದ ಯೋಜನೆಯನ್ನು ಸರ್ಕಾರ ತ್ವರಿತವಾಗಿ ಕೈಗೊಂಡು ಅಭಿವೃದ್ಧಿಗೆ ಕ್ರಮವಹಿಸುವುದೇ? | ಮಲ್ಪೆ ಮೀನುಗಾರಿಕೆ ಬಂದರಿನ ಆಧುನೀಕರಣದ ಅಂದಾಜು ವೆಚ್ಚ ರೂ.12.52 ಕೋಟಿಗಳು, ಗಂಗೊಳ್ಳಿ ಮೀನುಗಾರಿಕೆ ಬಂದರಿನ ಆಧುನೀಕರಣದ ಅಂದಾಜು ವೆಚ್ಚ ರೂ. 22.18 ಕೋಟಿಗಳು ಮತ್ತು ಮಂಗಳೂರು ಮೀನುಗಾರಿಕೆ ಬಂದರಿನ ಆಧುನೀಕರಣದ ಅಂದಾಜು ವೆಚ್ಚ ರೂ. 37.50 ಕೋಟಿಗಳ ಅಂದಾಜು ಪಟ್ಟಿಗಳನ್ನು ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br><br>**<u>ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಕರ್ನಾಟಕ ಕರಾವಳಿಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಕಂಡಂತಿದೆ:-</u>**<br><br>ಕಿರು ಬಂದರುಗಳ ಅಭಿವೃದ್ಧಿ, ಕರಾವಳಿ ಸಂರಕ್ಷಣೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ Price waterhouse Coopers (PWC) ಸಂಸ್ಥೆಯಿಂದ ತಯಾರಿಸಲಾದ Karnataka Maritime Perspective Plan ನಲ್ಲಿಯ ವರದಿಯಂತೆ, Preparation of Master Plan for the development of non-major ports in Karnataka ವಿವರವಾದ ವರದಿ ತಯಾರಿಸಲು ಸಮಾಲೋಚಕರನ್ನು ನೇಮಿಸಲು ಕ್ರಮವಹಿಸಲಾಗಿದೆ ಹಾಗೂ ಈ ನಿಟ್ಟಿನಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ನೀತಿ-2023 ನ್ನು ರೂಪುಗೊಳಿಸಲು ಕ್ರಮವಹಿಸಲಾಗಿದೆ. |

ಸಂಖ್ಯೆ: ಪಸಂಮೀ ಇ-216 ಮೀಇಯೋ 2023

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು